ದಿನಾಂಕಃ **04.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿಗಳ ಪರ ಶ್ರೀ. ವಿ.ಎಮ್ .ವಕೀಲರಿಂದಃ

ನಿಪಿ-3 ಎಂದು ಗುರುತಿಸಲಾಗಿರುವ 12 ಪೋಟೊಗಳನ್ನು ಯಾರು ತೆಗೆದಿದ್ದು ಎಂದರೆ ನಾನೆ ತೆಗೆದಿದ್ದೆ. ಆ ಸಂಬಂಧ ನೀವು ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿ. ನಿಮ್ಮ ದಾವಾ ಸ್ವತ್ತಿನ ಶೆಡ್ಯೂಲನಲ್ಲಿ ಪೂರ್ವ- ಪಶ್ಚಿಮ ಮತ್ತು ಉತ್ತರ-ದಕ್ಷಿಣದ ವಿಸ್ತೀರ್ಣವನ್ನು ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಕಾಲಕ್ಕೆ ಗುಂಟೆ ಲೆಕ್ಕದಲ್ಲಿ ಸಲ್ಲಿಸಿದ್ದೆ. ನೀವು ಹೇಳಿದ ಹಾಗೆ ಉತ್ತರ-ದಕ್ಷಿಣ ನಿಮ್ಮ ಸ್ವತ್ತು 60 ಅಡಿಗಳು ಇಲ್ಲ ಕೇವಲ 55 ಅಡಿಗಳು ಮಾತ್ರ ಎಂದರೆ ಸರಿಯಲ್ಲ. ನೀವು ಹೇಳುವ ಪ್ರಕಾರ ಉತ್ತರ-ದಕ್ಷಿಣ -60 ಅಡಿಗಳು, ಪೂರ್ವ-ಪಶ್ಚಿಮ-44 ಅಡಿಗಳು ಎಂದರೆ ಒಟ್ಟು ಸೇರಿ ವಿಸ್ತೀರ್ಣ-2505 ಚದುರಡಿಗಳು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಎಂದು ಗುರುತಿಸಲಾಗಿರುವ 12 ಪೋಟೊಗಳಲ್ಲಿ ನಿಮ್ಮ ಪೂರ್ತ ದಾವಾ ಸ್ವತ್ತು ಯಾವ ಪೋಟೊದಲ್ಲಿ ಕಾಣಿಸುತ್ತದೆ ಎಂದು ತೋರಿಸಬಹುದೆ ಎಂದರೆ ಪ್ರತ್ಯೇಕ-ಪ್ರತ್ಯೇಕವಾಗಿ ತೆಗೆದುಕೊಟ್ಟಿದ್ದೇನೆ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದರಲ್ಲಿ ನಿಮ್ಮ ಸ್ವತ್ತಿದೆ ಎಂದರೆ ಸರಿ. ಆದರೆ ಕೆಂಪು ಶಾಹಿಯಲ್ಲಿ ಗುರುತಿಸಲಾಗಿರುವ ಸ್ವತ್ತು ನಮ್ಮದು ಎಂದರೆ ಪೋಟೊದಲ್ಲಿ ಕಾಣುತ್ತಿರುವ ಪೂರ್ತ ಜಾಗ ಮತ್ತು ಆಟೋ ನಿಲ್ಲಿಸಿರುವ ಜಾಗ ಸೇರಿಸಿ ನಮ್ಮದು ಎಂದು ಹೇಳುತ್ತಾರೆ. ಆಟೋ ನಿಲ್ಲಿಸಿರುವ ಜಾಗ 2 ನೇ ಪ್ರತಿವಾದಿಗೆ ಸೇರಿದ್ದು

ನಿಮ್ಮದಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋವನ್ನು ಸಾಕ್ಷಿ ಒಪ್ಪಿದ ಮೇರೆಗೆ **ನಿಡಿ-1** ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣುವ ಶೀಟಿನ ಮನೆ ನಮ್ಮದು ಅದರ ಹಿಂದಿನ ಬಿಲ್ಡಿಂಗ್ ನಮ್ಮದಲ್ಲ. ಆ ಹಿಂದಿನ ಬಿಲ್ಡಿಂಗ್ ದವರು ನಿಮ್ಮ ಜಾಗವನ್ನು ಅತೀಕ್ರಮ ಪ್ರವೇಶ ಮಾಡಿದ್ದಾರೆ ಅವರನ್ನು ಬಿಟ್ಟು ನಾವು ಅತೀಕ್ರಮ ಪ್ರವೇಶ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ ಎಂದರೆ ಅದು ನಮಗೆ ಗೊತ್ತಿಲ್ಲ. ನಿಮ್ಮ ದಾವಾ ಸ್ವತ್ತಿನ ವಿಸ್ತೀರ್ಣ ಶೆಡ್ಯೂಲ ನಲ್ಲಿ ಒಂದು ರೀತಿ, ಬಿ ಬಿ ಎಂ ಪಿಗೆ ಕೊಟ್ಟಿರುವ ದಾಖಲೆಗಳಲ್ಲಿ ಒಂದು ರೀತಿ ಮತ್ತು ಅಸಲು ದಾವಾ ಸಂಖ್ಯೆ 1214/2013 ಕೇಸನಲ್ಲಿ ಒಂದು ರೀತಿ ವಿಸ್ತೀರ್ಣವನ್ನು ಹೇಳಿರುವುದರಿಂದ ನಿಮಗೆ ನಿಮ್ಮ ಸ್ವತ್ತಿನ ಒಟ್ಟು ವಿಸ್ತೀರ್ಣವೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಮಗೆ ಪ್ರತಿವಾದಿ 3 ರಿಂದ 5 ಯಾರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ 3 ರಿಂದ 5 ರವರು ನಮ್ಮ ಟಾಯಿಲೆಟಿನ ಉತ್ತರ ದಿಕ್ಕಿನ ಮೂಲೆಯಲ್ಲಿ ಒಡೆದು ಹಾಕಲು ಬಂದಿದ್ದಾಗ ನಾನು ಅವರನ್ನು ನೋಡಿದ್ದೆ ಅವರು ಪ್ರತಿವಾದಿ 1 ಮತ್ತು 2 ರವರಿಂದ ಅರ್ಧ ಸೈಟನ್ನು ಖರೀದಿ ಮಾಡಿದ್ದರು ಎಂದು ಗೊತ್ತು. ನಿಮ್ಮ ವಾದ ಪತ್ರದಲ್ಲಿ ಎರಡನೆ ಪ್ರತಿವಾದಿ ಮತ್ತು 3 ರವರ ನಡುವೆ ಕ್ರಯದ ಕರಾರು ಪತ್ರವಾಗಿತ್ತು ಎಂದು ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ನಿಪಿ-7 ರಲ್ಲಿರುವ ಹಸಿರು ಶಾಹೆಯಿಂದ ಗುರುತಿಸಲಾಗಿರುವ 45X15 ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ಪ್ರತಿವಾದಿಗಳ ವಿರುದ್ಧ ದಾವೆ ಸಲ್ಲಿಸಲು ಯಾವುದೆ ಆಧಾರ ಇಲ್ಲದಿದ್ದರೂ, ಸುಳ್ಳು

ದಾವೆಯನ್ನು  ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**